ಎಲ್ಲ ಮಾಹಿತಿಯನ್ನು ಕೊಡುವುದಕ್ಕೂ ಸಹ ನಾನು ತಯಾರಿದ್ದೇನೆ. ಆದರೆ ವಿಪರೀತವಾಗಿ, ವಿಶೇಷವಾಗಿ ನಮಗೆ ಅಮದಾಗುತ್ತಿರುವ ಕಾರಣದಿಂದಾಗಿ ಆಗಿದೆ. ಇದನ್ನು ರಾಜ್ಯ ಸರ್ಕಾರವು ತೆಗೆದುಕೊಂಡಿಲ್ಲವೆಂದು ಇಲ್ಲ, ಇದಕ್ಕೆಲ್ಲಾ ಕೇಂದ್ರ ಸರ್ಕಾರದ ನೀತಿಯೇ ಕಾರಣವಾಗಿದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :— ಕೇಂದ್ರ ಸರ್ಕಾರದ ಅಂಕಿಸಂಖ್ಯೆಗಳು 7.5% ಎಂದು ಬಂದಿದೆ, ಈ ಸಾರಿ ಅದು 5-63 ಎಂದು ಡಿಕ್ರೀಸ್ ಆಗಿದೆ. ಆಮದು ಸಹ ಡಿಕ್ರೀಸ್ ಆಗುತ್ತಿದೆ. ಇವತ್ತು ಮಾನ್ಯ ಜಯಚಂದ್ರ ರವರು ತಮ್ಮ ಕಡೆಯಿಂದ ರಾಜ್ಯಸರ್ಕಾರದ ಪರವಾಗಿ ರೈತರಿಗೆ ನೆರವನ್ನು ಕೊಡುವುದಕ್ಕಾಗುವುದಿಲ್ಲ. ಇವರು ಕೇಂದ್ರ ಸರ್ಕಾರದ ಮೇಲೆ ಗೂಬೆಯನ್ನು ಕೂರಿಸುವಂತಹ ಕೆಲಸವನ್ನು ಸತತವಾಗಿ ಮಾಡುತ್ತಿದ್ದಾರೆ. ನೀವು ರೈತರ ಜೀವನವನ್ನು ಹಾಳುಮಾಡುತ್ತಿದ್ದೀರಿ. ಇದನ್ನು ನಾವು ಪ್ರತಿಭಟನೆ ಮಾಡಿ ಸಭಾ ತ್ಯಾಗ ಮಾಡುತ್ತಿದ್ದೇನೆ.

(ಈ ಹಂತದಲ್ಲಿ ಮಾನ್ಯ ವಿರೋಧಪಕ್ಷದ ನಾಯಕರ ನೇತೃತ್ವದಲ್ಲಿ ಬಿಜೆಪಿ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಸಿ. ಚೆನ್ನಿಗಪ್ಪ :— ಮಾನ್ಯ ಅಧ್ಯಕ್ಷರೆ, ಈಗ ನಮ್ಮ ಮಾನ್ಯ ಮಂತ್ರಿಗಳು ಪ್ರಶ್ನೆಗೆ ಉತ್ತರವನ್ನು ಕೊಟ್ಟರು. ಅವರು ಉತ್ತರವನ್ನು ಕೊಟ್ಟಂತಹ ರೀತಿ ಹೇಗಿತ್ತು ಎಂದರೆ, ಎಳೆಯ ಮಕ್ಕಳ ಕತೆ ಹೇಳಿದ ಹಾಗೆ ಇತ್ತು. ಪ್ರತಿಯೊಂದು ವಿಚಾರದಲ್ಲಿಯೂ ಕೂಡ ನಾವು ಮಾಡಿದ್ದೇವೆ, ನಮಗೆ ಕೇಂದ್ರ ಸರ್ಕಾರದವರು ಅನುಮತಿಯನ್ನು ಕೊಟ್ಟಿಲ್ಲ, ಎಂದು ಹೇಳಿದರು ಆದರೆ ಅವರು ಕೇಂದ್ರಕ್ಕೆ ಏನು ಬರೆದು ಕಳುಹಿಸಿದ್ದಾರೆಂಬುದನ್ನು ಮೊದಲು ಸದನಕ್ಕೆ ಸ್ಪಷ್ಟಪಡಿಸಬೇಕು. ನಿಮ್ಮ ಸರ್ಕಾರ ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ರೈತರಿಗೆ, ನಿಮಗೆ ಬೆಂಬಲ ಬೆಲೆಯನ್ನು, ನೀರಾವರಿಯನ್ನು, ಹಳ್ಳಿಯ ಮಕ್ಕಳಿಗೆ ಉದ್ಯೋಗವನ್ನು ಕೊಡುತ್ತೇವೆ, ಅನುಕೂಲವನ್ನು ಮಾಡಿಕೊಡುತ್ತೇವೆಂದು ಚುನಾವಣಾ ಸಮಯದಲ್ಲಿ ಹೇಳಿದ್ದೀರಿ. ಆದರೆ ತೆಂಗಿನ ಬೆಳೆಗೆ ಬಂದು ಬೆಂಬಲ ಬೆಲೆಯನ್ನು ಫಿಕ್ಸ್ ಮಾಡುವಂತಹ ಶಕ್ತಿ ನಿಮ್ಮ ಸರ್ಕಾರಕ್ಕೆ ಬರಲಿಲ್ಲ. ನಾವುಗಳೆಲ್ಲರೂ ಹಳ್ಳಿಯಿಂದಲೇ ಬಂದವರಾಗಿದ್ದೇವೆ, ಆಮದು ನೀತಿಯನ್ನು ಫಿಕ್ಸ್ ಮಾಡಬೇಕೆಂದು ಅವರುಗಳು ಹೇಳುತ್ತಾರೆ. ನಾನು ಸರ್ಕಾರದವರಲ್ಲಿ ವಿನಂತಿಯನ್ನು ಮಾಡುವುದೇನೆಂದರೆ, ಇವತ್ತು ತೆಂಗಿನಕಾಯಿಯ ಬೆಲೆ ಒಂದು ರೂಪಾಯಿಗೆ 3 ಕಾಯಿ ಆಗಿದೆ, ಅದನ್ನು ಸರ್ಕಾರವೇ ತೆಗೆದುಕೊಂಡು ಅದಕ್ಕೆ ಒಂದು ಬೆಂಬಲ ಬೆಲೆಯನ್ನು ಫಿಕ್ಸ್ ಮಾಡಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.